(5) ರಾಜ್ಯದಲ್ಲಿ ಗೋಬರ್ ಗ್ಯಾಸ್ ವ್ಯವಸ್ಥೆಗೆ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡದೇ ಇರುವುದು,

ಶ್ರೀ ಬಿ.ಎಸ್. ಯಂಡಿಯೂರಪ್ಪ.—ಕರ್ನಾಟಕ ರಾಜ್ಯದಲ್ಲಿ ಸಬ್ಸಿಡಿ ಹಣ ಬರುವುದೆಂದು ನಂಬಿ ಸಾವಿರಾರು ಜನ ರೈತರು 'ಗೋಬರ್ ಗ್ಯಾಸ್' ವ್ಯವಸ್ಥೆ ಮಾಡಿಕೊಂಡಿದ್ದು ಈವರೆಗೆ ಡಿಸೆಂಬರ್ ೧೯೮೭ ರವರೆಗೆ ಸಬ್ಸಿಡಿ ಹಣ ಬಿಡುಗಡೆ ಮಾಡದೆ ಇದನ್ನು ನಂಬಿ ಗೋಬರ್ ಗ್ಯಾಸ್ ವ್ಯವಸ್ಥೆಗೆ ಬ್ಯಾಂಕ್‌ಗಳಿಂದ ಸಾಲ ಪಡೆದಿದ್ದು ಅದರ ಮೇಲೆ ಬಡ್ಡಿ ಹಾಕಿದ್ದು ರೈತನಿಗೆ ತುಂಬಲಾರದ ನಷ್ಟವಾಗಿದೆ. ಆದ್ದರಿಂದ ೩೦-೧೨-೧೯೮೮ ರವರೆಗೆ ರಾಜ್ಯದಲ್ಲಿ ಈ ರೀತಿ ಸರ್ಕಾರದ ಸಬ್ಸಿಡಿ ಹಣ ನಂಬಿ ಗೋಬರ್ ಗ್ಯಾಸ್ ವ್ಯವಸ್ಥೆ ಮಾಡಿಕೊಂಡಿದ್ದು ಸಬ್ಸಿಡಿ ಸಿಗದ ಪ್ರಯೋಜನದಾರರ ಸಂಖ್ಯೆ ಎಷ್ಟು ? ಬಿಡುಗಡೆ ಮಾಡಬೇಕಾದ ಒಟ್ಟು ಸಬ್ಸಿಡಿ ಹಣವೆಷ್ಟು ? ಸಬ್ಸಿಡಿ ಹಣ ಯಾವಾಗ ಬಿಡುಗಡೆ ಮಾಡಲಾಗುವುದು ಎಂಬ ಬಗ್ಗೆ ಸರ್ಕಾರದ ಹೇಳಿಕೆಯನ್ನು ತಿಳಿಯಬಯಸುತ್ತೇನೆ.

ಶ್ರೀ ಎಂ. ರಘುಪತಿ.—ವಾಳಿ ಅವರಿಗೆ ಉತ್ತರ ತರಿಸಿಕೊಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿಗೆ ಹುಡ್ಕೋ ಸಂಸ್ಥೆಯಿಂದ ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡುವ ಬಗ್ಗೆ

೨-೦೦ ಪಿ. ಎಂ.

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್‌ಗೆ ಹೊಂದಿಕೊಂಡು ಹುಡ್ಕೋ ಯೋಜನೆಯನ್ವಯ ೧೯೮೩ನೇ ವರ್ಷದಿಂದ ಸಾಧಾರಣ ೧ ಕೋಟಿ ೬೦ ಲಕ್ಷ ರೂಪಾಯಿಯಷ್ಟು ಹುಡ್ಕೋ ಫಲಾನುಭವಿಗಳಿಗೆ ಪಾವತಿಯಾಗದೆ ಬಾಕಿ ಉಳಿದಿರುತ್ತದೆ ಹುಡ್ಕೋ ಫಲಾನುಭವಿಗಳು ಮನೆ ಕಟ್ಟಿ ಅಥವಾ ಗೋಡೆಯವರೆಗೆ ಮನೆ ಪೂರ್ತಿಯಾಗಿದ್ದು ಬೇರೆ ಬೇರೆ ರೀತಿಯ ಸಾಲದ ಮೂಲಕ ಹಾಗೂ ಆರ್ಥಿಕ ಸಹಾಯವನ್ನು ಪಡೆದು ಮನೆ ಕೆಲಸ ಮುಂದುವರೆಸಿದ್ದು ಹಣಕ್ಕೋಸ್ಕರ ಅಲೆದಾಡುವುದು ತುಂಬಾ ವರ್ಷದಿಂದ ನಡೆದುಬಂದಿದೆ. ಇದರಿಂದ ದುರ್ಬಲ ವರ್ಗದವರಿಗೆ ತುಂಬಾ ತೊಂದರೆಯಾಗಿದ್ದು ಸರ್ಕಾರದಿಂದ ಪಾವತಿಯಾಗಲು ಬಾಕಿ ಉಳಿದಿರುವ ಹಣವನ್ನು ಕೂಡಲೇ ಜಿಲ್ಲಾ ಪರಿಷತ್ತಿಗೆ ಬಿಡುಗಡೆ ಮಾಡಿ ತೊಂದರೆಗೀಡಾದ ಜನರ ಕಷ್ಟನಷ್ಟದಿಂದ ಬಿಡುಗಡೆಗೊಳಿಸಿ ಮನೆ ಕಟ್ಟಲು ಅವಕಾಶ ಕಲ್ಪಿಸಿಕೊಡಬೇಕಾಗಿ ತಮ್ಮ ಮುಖಾಂತರ ಸರಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಮಹಮದ್ ಮೊಯಿನುದ್ದೀನ್ (ವಸತಿ ರಾಜ್ಯ ಮಂತ್ರಿಗಳು) — ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೩-೮೪ ರಿಂದ ೧೯೮೪-೮೫ರ ವರೆಗೆ ಹುಡ್ಕೋ ಯೋಜನೆಯನ್ವಯ ಸಾಲ ಅಥವಾ ಸಬ್ಸಿಡಿ ಬಿಡುಗಡೆ ಮಾಡುವುದು ಯಾವುದೂ ಬಾಕಿ ಇರುವುದಿಲ್ಲ, ೧೯೮೫-೮೬ ಮತ್ತು ೧೯೮೬-೮೭ಕ್ಕೆ ಅನುಕ್ರಮವಾಗಿ ೫೨ ೪೦ ಲಕ್ಷ ರೂಗಳು ಮತ್ತು ೧೦೫.೨೨ ಲಕ್ಷ ರೂಗಳು ಒಟ್ಟಿಗೆ ೧೫೮.೬೨ ಲಕ್ಷ ರೂಗಳನ್ನು ಬಿಡುಗಡೆ ಮಾಡಬೇಕಾಗಿದೆ. ಸದರಿ ಹಣವನ್ನು ಜರೂರಾಗಿ ಬಿಡುಗಡೆ ಮಾಡಲು ಸರ್ಕಾರ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತದೆ.

ಶ್ರೀ ಕುಶಾಲ್.—೧ ಕೋಟಿ ೬೨ ಲಕ್ಷ ಬಾಕಿ ಇದೆ,

ಶ್ರೀ ವಿನಯ ಕುಮಾರ್ ಸೊರಕೆ.—೧ ಕೋಟಿ ೬೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ.

ಅಧ್ಯಕ್ಷರು.—ನಿಮಗೆಷ್ಟು ಸಾರಿ ಹೇಳಬೇಕು ರೂಲ್ಸ್ ಓದಿಕೊಳ್ಳಿ ಎಂದು.

ಶ್ರೀ ಕುಶಾಲ್.—ಮಳೆಗಾಲದ ಹೊತ್ತಿಗೆ ಗೋಡೆ ಕಟ್ಟಿಕೊಳ್ಳಬೇಕಾಗಿದೆ. ಎರಡು ವರ್ಷದಿಂದ ಹಣ ಕೊಟ್ಟಿಲ್ಲ.

ಅಧ್ಯಕ್ಷರು.—ನಿಮಗೆ ರೂಲ್ಸ್ ಗೊತ್ತಿಲ್ಲವೆ ? ಹೊಸದಾಗಿ ಬಂದಿದ್ದೀರಾ ?

ಶ್ರೀ ಬಿ. ಲಕ್ಕಪ್ಪ.—ರೂಲ್ಸ್ ಗೊತ್ತಿದೆ. ಅದರಿಂದ ಪ್ರಯೋಜನವಾಗುವುದಿಲ್ಲ ಎಂದು ಹೇಳುತ್ತಿರುವುದು.